**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>SC.33/2024</u>**

ಸಾಕ್ಷಿದಾರರ ಹೆಸರು : ವಿರೇಶ

ತಂದೆಯ ಹೆಸರು : ಶೇಖಪ್ಪ

ವಯಸ್ಸು : 38 ವರ್ಷ

ಉದ್ಯೋಗ : ಗೋಬಿ ಅಂಗಡಿ ವ್ಯಾಪಾರ

ವಾಸ ಸ್ಥಳ : ದಾವಣಗೆರೆ

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 9

ದಿ: 16-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u>**:

1. ನನಗೆ ಚಾಸಾ-1 ಮತ್ತು 10 ರವರ ಪರಿಚಯ ಇದೆ. ನಾನು ಮತ್ತು ಚಾಸಾ-1 ರವರು ತಳ್ಳೊ ಗಾಡಿಯಲ್ಲಿ ತಿಂಡಿಗಳಾದ ಗೋಬಿ ಮತ್ತು ದೋಸೆ ಮಾಡಿ ನಮ್ಮ ಜೀವನ ನಡೆಸುತ್ತಿದ್ದೆವು. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇದೆ. ಆರೋಪಿ ತಳ್ಳೋ ಗಾಡಿಯಲ್ಲಿ ತಿಂಡಿಯಾದ ನರ್ಗಿಸ್ ಮಂಡಕ್ಕಿ ವ್ಯಾಪಾರ ಮಾಡುತ್ತಿದ್ದರು.

2. ದಿಃ 20-09-2022 ರಂದು ಸಂಜೆ 5.30 ಸಮಯದಲ್ಲಿ ನಾನು ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ಹಿಂದೂ ಮಹಾಗಣಪತಿಯ ಇಟ್ಟಿದ್ದರಿಂದ ಅಲ್ಲಿ ತಳ್ಳೋ ಗಾಡಿ ಇಟ್ಟುಕೊಂಡು ಗೋಬಿ ವ್ಯಾಪಾರ ಮಾಡುತ್ತಿದ್ದೆ. ನನ್ನೊಂದಿಗೆ ಚಾಸಾ-1 ರವರು ಇದ್ದರು. ನಮ್ಮ ಗಾಡಿಯ ಪಕ್ಕದಲ್ಲಿ ಆರೋಪಿಯು ತನ್ನ ವ್ಯಾಪಾರವನ್ನು ತನ್ನ ಗಾಡಿಯಲ್ಲಿ ಮಾಡಿಕೊಂಡಿದ್ದನು. ಸದರಿ ದಿನಾಂಕದಂದು ನಾನು

ಒಬ್ಬನೇ ನನ್ನ ಗಾಡಿಯಲ್ಲಿ ವ್ಯಾಪಾರ ಮಾಡಿಕೊಳ್ಳುತ್ತಿದ್ದೆ. ಒಮ್ಮೇಲೆ ಆರೋಪಿಯು ಬಂದು ನನ್ನೊಂದಿಗೆ ಗಲಾಟೆ ಮಾಡಿದನು. ನಾನು ಏಕೆ ಗಲಾಟೆ ಮಾಡುತ್ತಿದ್ದೀಯಾ ಅಂತ ಕೇಳಿದಾಗ ಗಾಡಿ ಹಿಂದೆ ಮುಂದೆ ಇಡುವ ವಿಚಾರದಲ್ಲಿ ಗಲಾಟೆಯಾಯಿತು. ಆರೋಪಿಯು ಗಾಡಿ ಇಲ್ಲಿ ಇಡಬೇಡ ಅಂತ ಹೇಳಿದರು. ಆಗ ನಾನು ನಮ್ಮ ಅಣ್ಣನಿಗೆ ಕೇಳಿ ಹೇಳುತ್ತೇನೆ ಅಂತ ಹೇಳಿದೆ. ಅದಕ್ಕೆ ಆರೋಪಿಯು ಯಾರಿಗಾದರೂ ಹೇಳಿಕೋ ಅಂತ ಹೇಳಿದ. ನಂತರ ನಾನು ಈ ವಿಚಾರವನ್ನು ನನ್ನ ಅಣ್ಣನಾದ ಚಾಸಾ-1 ರವರಿಗೆ ತಿಳಿಸಿದೆ. ನಮ್ಮ ಅಣ್ಣರವರು ಫೋನ್ ನಲ್ಲಿ ಅಕ್ಕಪಕ್ಕದವರು ಇರುತ್ತಾರೆ ಸುಧಾರಿಸಿಕೊಂಡು ವ್ಯಾಪಾರ ಮಾಡಿಕೊಂಡು ಬಾ ಅಂತ ಹೇಳಿದರು.

3. ಮಾರನೇ ದಿನ ದಿಃ 21-09-2022 ರಂದು ನಾನು, ಚಾಸಾ-1 ಮತ್ತು ಚಾಸಾ-10 ರವರು ಸಂಜೆ 5.30 ಗಂಟೆಗೆ ಹೈಸ್ಕೂಲ್ ಮೈದಾನಕ್ಕೆ ನಮ್ಮ ವ್ಯಾಪಾರ ಮಾಡಲು ಬಂದೆವು. ಗಾಡಿ ಎಲ್ಲಾ ಹಚ್ಚಿಕೊಳ್ಳುತ್ತಾ ಇದ್ದೆವು. ಆಗ ಆರೋಪಿಯು ಏಕಾಏಕಿ ಬಂದು " ನಿಮಗೆ ಕೊಲೆ ಮಾಡುತ್ತೇನೆ, ಸೂಳೇ ಮಕ್ಕಳೇ" ಅಂತ ಹೇಳಿ ಚಾಸಾ-1 ರವರಿಗೆ ಚಾಕುವನ್ನು ಹೊಟ್ಟೆಗೆ ಹಾಕಲು ಬಂದಾಗ ಅವರು ತಪ್ಪಿಸಿಕೊಂಡರು, ಅದು ಚಾಸಾ-1 ರವರ ಎಡಭುಜಕ್ಕೆ ಪೆಟ್ಟಾಯಿತು. ಧನಂಜಯ್ಯ ನಾಯ್ಕ ಮತ್ತು ದೇವೆಂದ್ರ ನಾಯ್ಕರವರು ಚಾಸಾ-1 ರವರನ್ನು ಹಿಡಿದುಕೊಂಡರು. ಆಗ ಆರೋಪಿಯು ಚಾಕುವನ್ನು ಅಲ್ಲೇ ಎಸೆದು ನಿಮ್ಮನ್ನು ನೋಡಿಕೊಳ್ಳುತ್ತೇನೆ ಅಂತ ಹೇಳಿ ಓಡಿ ಹೋದರು. ನಾನು ಮತ್ತು ಚಾಸಾ-10 ರವರು ಜಗಳ ಬಿಡಿಸಿದೆವು. ಆ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.3 ಅಂತ ಗುರುತಿಸಲಾಗಿದೆ. ಆರೋಪಿಯು ಚಾಸಾ-1 ರವರನ್ನು ಸಾಯಿಸಲು ಚಾಕುವನ್ನು ಹಾಕಿದರು. ನಂತರ ಚಾಸಾ-1 ರವರನ್ನು ದಾವಣಗೆರೆಯ ಸಿ.ಜಿ. ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಸ್ಪತ್ರೆಯಲ್ಲಿ MLC ಮಾಡಿದರು. ನಂತರ ಪೊಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟೆವು. ಆ ದಿನ ಚಾಸಾ-1 ರವರು ಹಳದಿ ಬಣ್ಣದ ಟಿ ಶರ್ಟ

ಮತ್ತು ಬಿಳಿ ಬಣ್ಣದ ಬಟ್ಟೆಗಳನು ಹಾಕಿದ್ದರು. ಅವುಗಳನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಅಂತ ಗುರುತಿಸಲಾಗಿದೆ. ಮು.ಮಾ.1 ಮತ್ತು 2 ಕ್ಕೆ ಚಾಸಾ-1 ರವರ ರಕ್ತ ತಾಗಿತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಚಾಸಾ-1 ರವರನ್ನು ಕೊಲೇ ಮಾಡಲು ಪ್ರಯತ್ನ ಮಾಡಿದ ಆರೋಪಿ ಇರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಶ್ರೀ ., ವಕೀಲರಿಂದ ಆರೋಪಿತರ ಪರವಾಗಿ**:

4. ದಾವಣಗೆರೆಯ ಹೈಸ್ಕೂಲ್ ಮೈದಾನ 20 ಎಕರೆ ಇರಬಹುದು. ಮೈದಾನದ ನಡುವೆ ಹಿಂದೂ ಮಹಾ ಗಣಪತಿ ಇತ್ತು. ಹೈಸ್ಕೂಲ್ ಮೈದಾನದ ಮಧ್ಯ ಭಾಗದಲ್ಲಿ ನಾನು ನನ್ನ ವ್ಯಾಪಾರ ಮಾಡಿಕೊಂಡಿದ್ದೆ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಪೊಲೀಸರಿಗೆ ನಾನು ಆರೋಪಿಯು ನನ್ನೊಂದಿಗೆ ಗಲಾಟೆ ಮಾಡಿ " ಗಾಡಿ ಇಲ್ಲಿ ಇಡಬೇಡ, ಅದಕ್ಕೆ ನನ್ನ ಅಣ್ಣನಿಗೆ ಕೇಳಿ ಹೇಳುತ್ತೇನೆ" ಅಂತ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ನಾನು ಹೇಳಿದಂತಹ ರೀತಿಯಲ್ಲಿ ನಾನು ಅಲ್ಲ್ ಯಾವುದೇ ಗಾಡಿ ಇಟ್ಟಿರಲಿಲ್ಲ ಮತ್ತು " ಗಾಡಿ ಇಲ್ಲಿ ಇಡಬೇಡ, ಅದಕ್ಕೆ ನನ್ನ ಅಣ್ಣನಿಗೆ ಕೇಳಿ ಹೇಳುತ್ತೇನೆ" ಎನ್ನುವ ವಿಷಯ ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಈ ಗಲಾಟೆಯು 10 ನಿಮಿಷ ಆಗಿರುತ್ತದೆ. ಈ ಗಲಾಟೆ ಆದಾಗ ಜನರು ಯಾರೂ ಕೂಡಿರಲಿಲ್ಲ. ದಾವಣಗೆರೆಯ ಹೈಸ್ಕೂಲ್ ಮೈದಾನ ಜನನಬೀಡ ಪ್ರದೇಶ ಅಂದರೆ ಆಗ ಅಲ್ಲಿ ಯಾರೂ ಇರಲಿಲ್ಲ. ಆ ದಿನ ನಾನು ಒಬ್ಬನೇ ವ್ಯಾಪಾರ ಮಾಡುತ್ತಿದ್ದು, ಆರೋಪಿಯು ನನ್ನೊಂದಿಗೆ ಗಲಾಟೆ ಮಾಡಿದ ವಿಷಯ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಗಲಾಟೆ ಆಗುತ್ತಿರುವಾಗ ಗ್ರಾಹಕರು ಯಾರೂ ಬಂದಿರಲಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಗಾಡಿ ಇನ್ನೂ ಹಚ್ಚುತ್ತಿದ್ದೆ. ಆ ದಿನ ನಾನು

ಗಾಡಿ ಹಚ್ಚುತ್ತಿರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-1 ರವರಿಗೆ ಈ ಗಾಡಿದ ವಿಚಾರದ ಬಗ್ಗೆ ಫೋನ್ ನಲ್ಲಿ ತಿಳಿಸಿದ್ದೇನೆ ಅಂತ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ.

5. ದಿಃ 21-09-2022 ರಂದು ಆರೋಪಿಯು ಒಮ್ಮೇಲೆ ಬಂದು ಚಾಸಾ-1 ರವರಿಗೆ ಚಾಕು ಹಾಕಲು ಬಂದಿದ್ದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಮ್ಮ ಹೇಳಿಕೆಯಲ್ಲಿ ಆರೋಪಿಯನ್ನು ಧನಂಜಯ್ಯ ನಾಯ್ಕ ಮತ್ತು ದೇವೇಂದ್ರ ನಾಯ್ಕರವರು ಹಿಡಿದುಕೊಂಡಿದ್ದರು ಅಂತ ಹೇಳಿದ್ದೀರಾ ಅಂದರೆ ಹೇಳಿಲ್ಲ. ಚಾಕು ಎಸೆದು ಹೋಗಿರುವುದಾಗಿ ನಾನು ಪೊಲೀಸರಿಗೆ ಹೇಳಿಲ್ಲ ಅಂದರೆ ಸರಿಯಲ್ಲ. ಚಾಕು ಎಸೆದು ಓಡಿ ಹೋದ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ದಿಃ 21-09-2022 ರಂದು ನಾನು ಹೇಳಿದಂತಹ ಗಲಾಟೆಯಾದಾಗ ಜನರು ಯಾರೂ ಬಂದಿರಲಿಲ್ಲ. ಆರೋಪಿಯು ಚಾಕುವನ್ನು ಚಾಸಾ-1 ರವರ ಹೊಟ್ಟೆಗೆ ಹಾಕಲು ಹೋದಾಗ ಅದು ಚಾಸಾ-1 ರವರ ಎಡಭುಜಕ್ಕೆ ಪೆಟ್ಟಾದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ಎಲ್ಲಾ ಘಟನೆಯು ಹೈಸ್ಕೂಲ್ ಮೈದಾನದ ನಡುಭಾಗದಲ್ಲಿ ಆಗಿರುತ್ತದೆ. ಈ ರೀತಿ ಮಧ್ಯಭಾಗದಲ್ಲಿ ಗಲಾಟೆಯಾಗಿದೆ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.3 ರಂತಹ ಚಾಕು ಎಲ್ಲರ ಮನೆಯಲ್ಲಿ ಇದ್ದೇ ಇರುತ್ತದೆ ಅಂದರೆ ನಿಜ. ಮು.ಮಾ.1 ಮತ್ತು 2 ರಂತಹ ಬಟ್ಟೆಗಳು ಎಲ್ಲರ ಮನೆಗಳಲ್ಲಿ ಇರುತ್ತವೆ ಅಂದರೆ ಸರಿಯಲ್ಲ. ಆರೋಪಿಯು ಚಾಸಾ-1 ರವರಿಗೆ ಚಾಕು ಹಾಕಲು ಬಂದಿದ್ದ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ.1 ಮತ್ತು 2 ಕ್ಕೆ ರಕ್ತ ಹತ್ತಿತ್ತು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

7. ಮೈದಾನದ ಹಿಂಭಾಗ ಅಂದರೆ ದಕ್ಷಿಣ ಕಡೆ ಯಾರೂ ವ್ಯಾಪಾರ ಮಾಡುವುದಿಲ್ಲ. ಸಾಕ್ಷಿದಾರರು ಹೇಳುತ್ತಾರೆ ನಾವು ವ್ಯಾಪಾರ ಮಾಡಿರುವುದಿಲ್ಲ. ಸಂಜೆ 5.30 ಗಂಟೆಗೆ ಶಾಲೆ ಮತ್ತು ಕಾಲೇಜು ಬಂದ್ ಆಗಿರುತ್ತದೆ ಅಂದರೆ ನಿಜ. ನಾನು ಮತ್ತು ಚಾಸಾ-10 ರವರು ಜಗಳ ಬಿಡಿಸಿದೆವು ಅಂತ

ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-10 ರವರು ಚಾಸಾ-1 ರವರ ಅಳಿಯ ಅಂದರೆ ನಿಜ. ನಾನು ಮತ್ತು ಚಾಸಾ-10 ರವರು ವಿಶ್ವಾಸಿಗರು ಅಂದರೆ ನಿಜ. ನಾನು ಹೇಳಿದಂತಹ ರೀತಿ ಯಾವುದೇ ಗಲಾಟೆ ಆಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-1 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.